# ಕತ್ತೆಯ ಸಂಗೀತಕ್ಕೆ ಸಿಕ್ಕ ಉಡುಗೊರೆ

ಒಂದು ಊರಿನಲ್ಲಿ ಉದ್ಧತ ಎಂಬ ಕತ್ತೆ ಇತ್ತು. ಪ್ರತಿದಿನ ಹಗಲಿನಲ್ಲಿ ಡೋಬಿ ಹೊರೆಗಳನ್ನು ಹೊತ್ತು ರಾತ್ರಿಯಲ್ಲಿ ಮನಬಂದಂತೆ ಸಂಚರಿಸಿ ಮುಂಜಾನೆ ತಾನೇ ತನ್ನ ಮಾಲೀಕನ ಮನೆಗೆ ಬಂದುಬಿಡುತಿತ್ತು.

ಒಮ್ಮೆ ಅದಕ್ಕೆ ನರಿಯ ಜೊತೆಗೆ ಸ್ನೇಹವಾಗಿ ಅದರ ಜೊತೆಗೆ ನಿತ್ಯವೂ ರಾತ್ರಿ ಹೊಲದಲ್ಲಿ ಮೇಯ್ದು, ಬೆಳಿಗ್ಗೆ ಮನೆ ಸೇರಿಕೊಳ್ಳುವ ಅಭ್ಯಾಸ ಬೆಳೆಸಿಕೊಂಡಿತ್ತು. ಒಂದು ರಾತ್ರಿ ಕತ್ತೆಯು ನರಿಗೆ, 'ಮಿತ್ರಾ ಇಂದು ಬೆಳದಿಂಗಳು ಎಷ್ಟೊಂದು ಹಿತವಾಗಿದೆ! ನನಗೆ ಹಾಡಬೇಕೆಂಬ ಆಸೆ ಉಂಟಾಗಿದೆ. ಯಾವ ರಾಗದಲ್ಲಿ ಹಾಡಲಿ? ನೀನೇ ಹೇಳು' ಎಂದಿತು. ಅದಕ್ಕೆ ನರಿ ಉತ್ತರಿಸಿತು: 'ಮಾವಾ, ಎಂಥಹ ವಿಚಿತ್ರ ಆಸೆ ನಿನ್ನದು? ಇದರಿಂದ ವಿನಾಕಾರಣ ನಾವು ಪೇಚು ತಂದುಕೊಳ್ಳುತ್ತೇವೆ. ಮೊದಲೇ ನಮ್ಮದು ಕಳ್ಳತನದ ವ್ಯವಹಾರ. ಕಳ್ಳರು ಅನೀತಿವಂತರು ಸಾಧ್ಯವಾದಷ್ಟು ಬಾಯಿ ಬಿಡದೇ ಇದ್ದರೆ, ಅವರಿಗೇ ಒಳ್ಳೆಯದು.'

'ಅಷ್ಟು ಮಾತ್ರವಲ್ಲ, ನಿನಗೆ ಉಳಿದವರಂತೆ ಒಳ್ಳೆಯ ಕಂಠ ಬೇರೆ ಇಲ್ಲ.ಮಹಾ ಕರ್ಕಶ.ಇದನ್ನು ಕೇಳಿ ಕಾವಲುಗಾರರಿಗೆ ಎಚ್ಚರರವಾಗುವುದು ಅವರು ಎದ್ದು ಬಂದು ನಮ್ಮಿಬ್ಬರನ್ನೂ ಹೊಡೆದು ಕೊಂದಾರು. ಸುಮ್ಮನೆ ಸೌತೆಕಾಯಿ ತಿಂದು ಹೋಗೋಣ, ಸಾಕು. ಮಧ್ಯರಾತ್ರಿಯಲ್ಲಿ ನಿನ್ನ ಸಂಗೀತ ಕಛೇರಿ ಯಾರಿಗೆ ತಾನೇ ಬೇಕು?' ಎಂದಿತು.

ಆಗ ಕತ್ತೆ 'ಛೇ, ನೀನು ಎಷ್ಟಾದರೂ ಕಾಡಿನ ಪಶು ನಿನಗೆ ರಸಿಕತೆಯೇ ಇಲ್ಲ' ಎಂದು ಹೀಗಳೆಯಿತು. ಆಗ ನರಿ ಮತ್ತೆ ಎಚ್ಚರಿಸಿತು. 'ಮಾವಾ ನೀನು ಏನೇ ಅನ್ನು, ನಿನ್ನ ಸಂಗೀತ ಕರ್ಣಕಠೋರ. ಮಲಗಿದವರು ಎಚ್ಚರವಾಗುತ್ತಾರೆ.' ಕತ್ತೆ ಠೇಂಕರಿಸಿತು.'ಹುಚ್ಚಾ ಸಂಗೀತಶಾಸ್ತ್ರ ಅರಿಯದ ಮೂರ್ಖ.' ಹಠಮಾರಿ ಕತ್ತೆಗೆ ಬುದ್ಧಿ ಹೇಳಲಾಗದೇ, ನರಿ ಅಡಗಿಕೊಂಡಿತು. ಕತ್ತೆ ತನ್ನ ಕರ್ಕಶ ರಾಗ ಆರಂಭಿಸಿದಾಗ, ಹೊಲ ಕಾಯುವವನು ಎದ್ದು ಬಂದು ಮನಬಂದಂತೆ ಹೊಡೆದನು. ಅಷ್ಟು ಮಾತ್ರವಲ್ಲದೆ ಒಂದು ಗುಂಡುಕಲ್ಲನ್ನು ಅದರ ಕತ್ತಿಗೆ ಕಟ್ಟಿದನು. ಚೇತರಿಸಿಕೊಂಡ ಕತ್ತೆ ಗುಂಡುಕಲ್ಲನ್ನು ಎಳೆಯುತ್ತಾ ಓಡುವುದನ್ನು ಕಂಡು ನರಿ ಹೀಗೆ ಹೇಳಿತು; 'ಸಾಧು ಮಾತುಲ ಗೀತೇನ ಮಯಾ ಪ್ರೋಕ್ತೋಪಿ ಚ ಸ್ಥಿತ:'

'ಮಾವ, ಈಗ ನಿನಗೆ ತಕ್ಕ ಶಾಸ್ತಿಯಾಯಿತು. ನನ್ನ ಮಾತನ್ನು ನೀನು ಅಲಕ್ಷಿಸಿದೆ. ಅದರ ಪ್ರತಿಫಲ ಹೀಗಾಯಿತು. ನಿನ್ನ ಸುಶ್ರಾವ್ಯ ಸಂಗೀತಕ್ಕೆ ತಕ್ಕ ಉಡುಗೊರೆ ಸಿಕ್ಕಿತು.'

ನೀತಿ; ನಮ್ಮ ಹಿತೈಷಿಗಳು ಹೇಳುವ ಬುದ್ಧಿವಾದವನ್ನು ಕೇಳಬೇಕು ಇಲ್ಲದಿದ್ದರೆ ನಾವು ಅನರ್ಥಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ.

■ ಸೀತಾ ಎಸ್. ನಾರಾಯಣ. ಹರಿಹರ

